ಮಾಡಾಕ ಊರಿಗೆ ಹೋಗಿ ಬರುವಾಗ ಸೆಂಜ್ಯಾಗಿತ್ತು. ಸಿರಿವಾರ ಬಸ್ ಸ್ಟ್ಯಾಂಡನ್ಯಾಗ ನಿಂತಿದ್ದೆ. ಲಚುಮಣ್ಣ ಮಾಷ್ಟ್ರ ಸಿಕ್ರು. ಅದು ಇದು ಮಾತಾಡಿ ಏನೇನೋ ಮರಳ ಮಾಡಿದ್ರು. ಕೊನಿಗೆ ನಾ ಸೋಲಬೇಕಾಯಿತು. ನಾಲ್ಕೈದು ಲಾಡ್ಜ್ ತಿರಿಗಿದ್ವಿ ನನ್ ಪುಣ್ಯಕ್ಕೆ ಎಲ್ಲ ತುಂಬಿದ್ವು ಖಾಲೀನೆ ಇರ್ಲಿಲ್ಲ. ಮಾಷ್ಟ್ರ ಮುಖ ಸಪ್ಪಗ ಮಾಡಕಂಡು ತಮ್ಮ ಬೈಕ್ ಮ್ಯಾಲೆ ಕರಕಂಡು ಬಂದು ಊರ ಹೊರಗ ಬಿಟ್ರು, ಮುಂದಿನ ಆಯಿತವಾರ ತಮ್ಮ ಮನಿಗೆ ಕರಕೊಂಡು ಹೋಗ್ತೀನಿ, ಹೆಂಡತಿ ತವರಿಗೆ ಹೋದಾಗ ಅಂತ ಹೇಳಿ ಹೋದ್ರು' ಅಂದಳು.

'ಅಯ್ಯಾ ಚೋಲಾತು ತಪ್ಪಿಸಿಕೊಂಡಿದ್ದು, ಆ ಹಾಳು ಮಾಷ್ಟ್ರ ಬರೀ ಹೆಣಮಕ್ಕಳ ಎದೀನ ನೋಡ್ತಿರುತಾರ' ಅಂತ ಶಾಂತ ಬೈಯುತ್ತಾ ಮುಖ ತೊಳೆದುಕೊಳ್ಳಲು ಬಚ್ಚಲ ಮನೆಗೆ ನಡೆದಳು.

ರಾಮು ಇವರ ಮಾತುಗಳನ್ನು ಕೇಳಿಸಿಕೊಂಡು ಕಿಡಕಿಯ ಜಾಲರಿಯಿಂದ ಆಕಾಶ ದಿಟ್ಟಿಸುತ್ತ ನಿಂತ. ಹತ್ತಿಗಿಡದ ಬಿಳಿಹಳ್ಳೆಯಂತೆ ಚೆಂದ ತೇಲಿಬಂದಿದ್ದ. ಕೈಯಿಂದ ಮುಟ್ಟುವಷ್ಟು ಮುಂದಾಗಿದ್ದ. ಅದನ್ನೆಲ್ಲ ನೋಡುತ್ತ ನಿಂತ ರಾಮುವಿನ ಮನಸ್ಸು ಹಗುರಾಗಿ ಕೈಯಲ್ಲಿ ಬಿಳಿಹಾಳೆ ತೆಗೆದುಕೊಂಡು ಚಿತ್ರಬಿಡಿಸತೊಡಗಿದ. ಚಂದ್ರ ಅದನ್ನು ನೋಡುತ್ತ ನಿಂತ ಬಾಲಕನ ಚಿತ್ರ, ಅಂಗಳದಲ್ಲಿ ಗುಟ್ಟಾಗಿ ಮಾತನಾಡುತ್ತಿರುವ ಇಬ್ಬರು ಓರಗಿತ್ತಿಯರು ಬಿಳಿಹಾಳೆ ಮೇಲೆ ಮೂಡಿ ಬಂದಿದ್ದರು.

5

ಬಿರುಬಿಸಲು ಕೆಂಡದಂತೆ ಆಕಾಶದಿಂದ ಸುರಿಯುತ್ತಿತ್ತು. ಕಾಲಲ್ಲಿ ಚಪ್ಪಲೀನೂ ಇಲ್ಲದೆ ರಾಮು ಬರಬರ ನಡೆಯುತ್ತಿದ್ದ. ಬಿಸಿಲಿನ ಝಳಕ್ಕೆ ಹಣೆಮೇಲಿಂದ ಬೆವರು ಇಳಿದು ಅವನ ಅಂಗಿ ತೋಯ್ದು ತೊಪ್ಪೆಯಾಗಿತ್ತು. ಒಂದು ಜನತಾ ಮನೆಯ ಮುಂದೆ ಬಂದು ನಿಂತ. ಮೂರು ವರ್ಷಗಳ ಹಿಂದೆ ತಾಯಿ ಜೊತೆ ಅಲ್ಲಿ ಬಂದಿದ್ದ. ತನ್ನ ತಂದೆಯ ಜೊತೆಗಿದ್ದ ಹೆಣ್ಣುಮಗಳ ಜೊತೆ ತನ್ನ ತಾಯಿ ಪಾರ್ವತಿ ಜಗಳಕ್ಕೆ ನಿಂತಿದ್ದಳು. ಮಾರಾಮಾರಿ ಜಗಳವನ್ನು ಕಣ್ಣಾರೆ ನೋಡಿದ್ದ. ಆದರೆ, ಅವನ ತಂದೆ ಪಾರ್ವತಿಯ ಯಾವ ಮಾತಿಗೂ ಜಗ್ಗದೆ ಆಕೆಯಲ್ಲಿಯೇ ಉಳಿಯುವ ಮಾತಾಡಿದ್ದ. ಪಾರ್ವತಿ ಹಿಡಿಮಣ್ಣನ್ನು ಕೈಯಲ್ಲಿ ಹಿಡಿದು ಮೂರು ಬಾರಿ ತೂರಿ 'ಹಾಳಾಗಿ ಹೋಗ್ರಿ' ಅಂತ ಶಾಪ ಹಾಕಿ, ರಾಮುವಿನ ಕೈಯಿಡಿದು ದರದರ ಎಳಕಂಡು ಬಂದ ದೃಶ್ಯ ಕಣ್ಣಲ್ಲಿ ಹಾಗೇ ಕಟ್ಟಿದಂತೆ ಇತ್ತು. ಇಂದು ಅದೇ ಮನೆ ಬಾಗಿಲು ಮುಂದೆ ಸ್ವಲ್ಪ ದೂರದಲ್ಲಿ ನಿಂತಿಕೊಂಡಿದ್ದ ಇವನನ್ನು ಆ ಮನೆಯ ಹೆಣ್ಣುಮಗಳು ಗುರುತು ಹಿಡಿದು ಒಳಗೆ ಕರೆದುಕೊಂಡು ಹೋದಳು. ರಾಮು ಸುತ್ತಲೂ ಕಣ್ಣಾಡಿಸಿದ. ಒಂದೇ ಒಂದು ರೂಮು ಅದರಲ್ಲೇ ಬಚ್ಚಲು ಮನೆ. ಒಂದು ಹಗ್ಗ ಕಟ್ಟಿ ಅಲ್ಲಿ ಕೆಲಬಟ್ಟೆಗಳನ್ನು ಹಾಕಿದ್ದರು. ಮೂಲೆಯಲ್ಲಿ ಒಂದು ಸೀಮೆಎಣ್ಣೆ ಸ್ಟೌ, ಮೂರು ಕೊಡ, ಚಿಕ್ಕ ಬಕೀಟು, ಕೆಲ ಪಾತ್ರೆಗಳು ಬಿಟ್ಟರೆ ಹೇಳಿಕೊಳ್ಳುವಂತಹ ಯಾವ ಸೌಕರ್ಯವು ಅಲ್ಲಿರಲಿಲ್ಲ.

ತಣ್ಣನೆಯ ಬಟ್ಟೆ ಸುತ್ತಿದ್ದ ಕೊಡಪಾನದಿಂದ ಒಂದು ಸಣ್ಣ ತಂಬಿಗೆ ಅದ್ದಿ ನೀರು ತಂದು ಕೊಟ್ಟಳು. ಬಿಸಿಲಿನ ಹೊಡೆತಕ್ಕೆ ತಲೆ ದಿಮ್ಮೆನ್ನುತ್ತಿತ್ತು. ತಂಬಿಗೆಯ ಕಂಠಕ್ಕೆ ಬಾಯಿ ಹಚ್ಚಿ ನೀರು ಕುಡಿದ. ತಣ್ಣನೆಯ ನೀರು ಹೊಟ್ಟೆಯೊಳಗೆ ಹೋದಾಗ ಮನಸ್ಸಿಗೆ ಆರಾಮ ಅನಿಸಿತು. 'ಅಮ್ಮ, ಅಕ್ಕ ಬೇಸಾರ?' ಅಂತ ಆಕೆ ರಾಮು ಪಕ್ಕದಲ್ಲಿ ಕುಳಿತು ಕೇಳಿದಳು. ರಾಮು ಸುಮ್ಮನೆ ತಲೆ ಆಡಿಸಿದ. 'ಏನು ತಿಂದಿದಿಯೋ ಏನೋ ತಗಪ್ಪಾ ಇದನ್ನ' ಅಂತ ಒಂದು ಸಿಲವಾರ ಗಂಗಳದಲ್ಲಿ ಅನ್ನ ಸಾರು ಕಲಿಸಿ ತಂದಳು. ರಾಮು ಮನಸ್ಸಲ್ಲಿ ಏನೇನೋ ಸಿಟ್ಟು ಇಟ್ಟುಕೊಂಡು ಬಂದವನು ಆಕೆಯ ಪ್ರೀತಿ ವಾತ್ಸಲ್ಯಕ್ಕೆ ಸೋತು ಕಣ್ಣೀರು ಸುರಿಸತೊಡಗಿದ. ಅಷ್ಟರಲ್ಲಿ ಬಂದ ರಾಮುವಿನ ಅಪ್ಪ ಅವನನ್ನು ನೋಡಿದ್ದೇ ತಡ, ಪಕ್ಕದಲ್ಲಿ ಬಂದು ಕುಳಿತು, 'ರಾಮು ಬೇಸಿದ್ದೇನಪ್ಪಾ? ಯಾವಾಗ ಬಂದಿ, ಒಬ್ನೆ ಬಂದೇನು?' ಅಂತ ಕೇಳಿದ. 'ಅಪ್ಪ ನೀನ್ಯಾಕೆ ನಮ್ ಜೊತೆ ಇಲ್ಲ? ಈ ಅಮ್ಮನನ್ನು ಕರಕಂಡು ನಮ್ ಜೊತೆ ಬಾ?' ಅಂದ. ಹುಚ್ಚು ಹುಡುಗ, ಅದು ಹಂಗಲ್ಲ ಅಂತ ಏನೋ ಹೇಳೋದಕ್ಕೆ ಬಂದ. 'ನೀ ಏನೂ ಹೇಳಬೇಡ, ನೀ ಬರಬೇಕಂದ್ರೆ ಬರಬೇಕು ಅಷ್ಟೇ!' ಅಂತ ಹಟ ಹಿಡಿದ. ಆಕೆ ಮತ್ತು ಆತ ಮುಖಮುಖ ನೋಡಿಕೊಂಡರು. 'ಸರಿ ಸರಿ... ಈಗ ಹೊತ್ತಾಯ್ತು ಮನಿಗೆ ಹೋಗು, ಹೇ ರೋಜ, ಇವನನ್ನು ಊರ ಹತ್ತಿರ ತನಕ ಬಿಟ್ಟು ಬಾ. ಇವ್ನು ಬಂದು ಎಷ್ಟೊತ್ತಾಯಿತೋ ಏನೋ ಅವ್ರು ಬುಗುಲು ಬಿದ್ದಿರುತ್ತಾರ' ಅಂತ ಆಕೆಯನ್ನು ನೋಡಿದ. ಆಕೆ ಆಯಿತು ಅನ್ನುವಂತೆ ಗೋಣು ಅಲ್ಲಾಡಿಸಿ ರಾಮುವನ್ನು